**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ**

**C.C.No. 285/2019**

| | | |
|---|---|---|
| **ಹೆಸರುಃ** | **ಸತೀಶ್** | **DW-1** |
| **ತಂದೆ/ಗಂಡ ಹೆಸರುಃ** | **ಬಾಬು ಪೂಜಾರಿ** | |
| **ವಯಸ್ಸುಃ** | **36 ವರ್ಷ** | |
| **ವೃತ್ತಿಃ** | **ಮೇಲ್ವಿಚಾರಕರು, ಎತ್ತಿನ ಹೊಳೆ ಯೋಜನೆ** | |
| **ವಿಳಾಸಃ** | **ಸಕಲೇಶಪುರ** | **ದಿನಾಂಕಃ01-12-2025** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಐ ಈ ಪಿ ವಕೀಲರಿಂದ**

ನನಗೆ ದೂರುದಾರರು ಹಳೇ ಮನೆಯಲ್ಲಿ ಒಂದೇ ಕಟ್ಟಡದಲ್ಲಿ ವಾಸವಿದುದ್ದರಿಂದ ಪರಿಚಯ ಇರುತ್ತಾರೆ. ಆನಂತರ ದೂರುದಾರರು ಹೊಸ ಮನೆ ಕಟ್ಟಿರುತ್ತಾರೆ. ಸದರಿ ಮನೆಯನ್ನು ನನಗೆ ಬೋಗ್ಯಕ್ಕೆ ನೀಡುತ್ತೇನೆಂದು ತಿಳಿಸಿದರು. ಆನಂತರ ನನ್ನ ಲಗೇಜ್ ಗಳನ್ನು ಸೆಲ್ಲಾರ್ ನಲ್ಲಿ ಇರಿಸುವಂತೆ ತಿಳಿಸಿದರು. ಆದರೆ ನನಗೆ ಇನ್ನೂ ಮನೆ ಕೊಟ್ಟಿರಲಿಲ್ಲಿ. ನನಗೆ ಬೋಗ್ಯಕ್ಕೆ ಕೊಡುತ್ತೇನೆ ಎಂದು ಹೇಳಿದ ಮನೆಯಲ್ಲಿ ಬೇರೆಯವರು ವಾಸವಿದ್ದರು. ಅವರು ಖಾಲಿ ಮಾಡಿದ ನಂತರ ನನಗೆ ಸದರಿ ಮನೆ ಕೊಡುವುದಾಗಿ ತಿಳಿಸಿದರು. ಆದ್ದರಿಂದ ಸ್ವಲ್ಪ ದಿನ ಇರಲು ಮತ್ತು ಸದರಿ

ಬಾಡಿಗೆದಾರರು ಖಾಲಿ ಮಾಡುವವರೆಗೆ ನನಗೆ ದೂರುದಾರರ ಮನೆಯಲ್ಲಿ ಒಂದು ಕೋಣೆಯನ್ನು ನೀಡಿದ್ದರು. ನನ್ನ ಮತ್ತು ದೂರುದಾರರ ನಡುವೆ ದಿಃ 09.08.2018 ರಂದು ರೂ 7 ಲಕ್ಷ ಗಳಿಗೆ ಬೋಗ್ಯ ಕರಾರು ಪತ್ರ ಸಹ ಆಗಿತ್ತು. ನಾನು ಕರಾರು ಸಂಬಂಧ ರೂ 4 ಲಕ್ಷ ಕ್ಕೆ ಚೆಕ್ ನಂಬರ್ 549128 ಚೆಕ್ ಸಹ ದೂರುದಾರರಿಗೆ ನೀಡಿರುತ್ತೇನೆ. ದಿಃ 18.07.2018 ರಂದು ಬೋಗ್ಯಕ್ಕೆ ಮನೆ ಕೊಡುತ್ತೇನೆಂದು ಹೇಳಿ ದೂರುದಾರರು ನನ್ನ ಲಗೇಜ್‌ನ್ನು ಇರಿಸಿಕೊಂಡಿದ್ದರು. ಆನಂತರ ದೂರುದಾರರು ನನಗೆ ಮನೆಯನ್ನು ಕೊಡದೇ ಮತ್ತು ನನ್ನ ಲಗೇಜ್ ನ್ನು ನೀಡದೇ ಸೆಲ್ಲಾರ್ ಗೆ ಬೀಗ ಹಾಕಿಕೊಂಡು ತಮಿಳುನಾಡಿಗೆ ಹೋಗಿರುತ್ತಾರೆ.

ಆನಂತರ ನನ್ನ ಮದುವೆ ನಿಶ್ಚಯ ಆಗಿದ್ದರಿಂದ ನನ್ನ ಲಗೇಜ್ ಮತ್ತು ಚೆಕ್ ನ್ನು ದೂರುದಾರರಿಂದ ವಾಪಸ್ಸು ಕೊಡಿಸುವಂತೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಆನಂತರ ದುರುದಾರರ ಮತ್ತೊಬ್ಬ ಪಾಲುದಾರರಾದ ದೇವೇಂದ್ರ ಎಂಬುವವರು ಬೀಗವನ್ನು ತೆಗೆದುಕೊಂಡು ಬಂದು ಪೊಲೀಸರ ಮೂಲಕ ವಿಡೀಯೋ ಮಾಡಿಕೊಂಡು ನಾನು ಲಗೇಜ್ ನ್ನು ವಾಪಸ್ಸು ಪಡೆದಿರುತ್ತೇನೆ. ಆನಂತರ ದೂರುದಾರರ ಮನೆಗೆ ನಾನು, ಹರೀಶ್, ಗೋಪಿ ಮತ್ತಿಬ್ಬರು ಹೋಗಿ ನನ್ನ ಚೆಕ್ ವಾಪಸ್ಸು ಕೊಡುವಂತೆ ಕೇಳಿರುತ್ತೇನೆ. ಆಗ ದೂರುದಾರರು ಚೆಕ್

ಕಳೆದುಹೋಗಿರುತ್ತದೆ ಎಂದು ತಿಳಿಸಿರುತ್ತಾರೆ. 3 ತಿಂಗಳ ನಂತರ ನನಗೆ ನೋಟೀಸ್ ಬಂದಿರುತ್ತದೆ. ನಾನು ನೋಟೀಸ್ ಗೆ ಉತ್ತರ ಸಹ ನೀಡಿರುತ್ತೇನೆ. ದೂರುದಾರರು ನನಗೆ ವಾಪಸ್ಸು ಚೆಕ್ ನೀಡಿರುವುದಿಲ್ಲ. ಮತ್ತು ತೊಂದರೆ ನೀಡುತ್ತಾ ಬಂದಿರುತ್ತಾರೆ. ದೂರುದಾರರು ಲಗೇಜ್ ಇಡುವ ಸಮಯದಲ್ಲಿ ನನ್ನಿಂದ ಸ್ವಲ್ಪ ಹಣವನ್ನು ಸಹ ಪಡೆದಿರುತ್ತಾರೆ. ಆದರೆ ಆ ಬಗ್ಗೆ ನನ್ನ ಬಳಿ ದಾಖಲೆ ಇಲ್ಲದೇ ಇರುವ ಕಾರಣ ಹಣ ಕೇಳಿರುವುದಿಲ್ಲ.  ನನಗೆ ಮನೆಯ ಅವಶ್ಯಕತೆ ಹೊರತು ಪಡಿಸಿ ದೂರುದಾರರಿಂದ ನಾನು ದೂರುದಾರರಿಂದ ಯಾವುದೇ ಸಾಲ ಪಡೆದಿರುವುದಿಲ್ಲ.

ಬೋಗ್ಯ ಕರಾರು ಪತ್ರಕ್ಕೆ ದೂರುದಾರರೇ ಸ್ಟ್ಯಾಂಪ್ ಪೇಪರ್ ತಂದಿರುತ್ತಾರೆ. ನನ್ನ ಪರ ದಯಾನಂದ ಎಂಬುವವರು ಕರಾರು ಪತ್ರಕ್ಕೆ ಸಹಿ ಮಾಡಿರುತ್ತಾರೆ. ದೂರುದಾರರು ಸಹ ಸಹಿ ಮಾಡಿ ಬೋಗ್ಯ ಕರಾರು ಪತ್ರ ನೀಡಿರುತ್ತಾರೆ. ಸಾಕ್ಷಿಯು ಬೋಗ್ಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು, ಅದನ್ನು

ನಿ.ಡಿ. 1 ಎಂದು ಗುರುತಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಎ  ಎಂದು ಗುರುತಿಸಲಾಯಿತು. ಸಾಕ್ಷಿಯು ದೂರುದಾರರ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ ಡಿ 1 ಬಿ ಎಂದು ಗುರುತಿಸಲಾಯಿತು. ದಿ 28-01-2020 ರ ಉತ್ತರ ನೋಟೀಸ್ ನ್ನು ನಿ ಡಿ 2

ಎಂದು , ಅಂಚೆ ರಸೀದಿಯನ್ನು ನಿ.ಡಿ. -3 ಎಂದು ಮತ್ತು ಅಂಚೆ ಸ್ವೀಕೃತಿಯನ್ನು ನಿ.ಡಿ.-4 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಅನುಮತಿ ನೀಡಲಾಯಿತು.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

ಪ್ರಧಾನ **ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**